ಆಫೀಸ್ ಹೆಸರು.	ನಂಬರು.	ದಸ್ತಾವೇಜು ಬರದುಕೊಟ್ಟುವರ ಹೆಸರು ಮತ್ತು ಅಡಿವರ್ಣ.	ದಸ್ತಾವೇಜು ಬರಸಿಕೊಂಡವರ ಹೆಸರು ಮತ್ತು ಅಡಿವರ್ಣ.	ರಿಜಿಸ್ಟ್ರಿಗೆ ಬಂದಾಗಿನ ತಾರೀಖು.	ರಿಜಿಸ್ಟರು ಆದ ತಾರೀಖು.	ಸ್ವಭಾವ ಮತ್ತು ಕಿಮ್ಮತ್ತು.
ಮೈಸೂರು ಸಬ್ ರಿಜಿಸ್ಟ್ರಿ ಆಫೀಸ್.	ತಿರಸ್ಕರಿಸಿದ್ದು.	ಮೈಸೂರು ಮಂಡಿಮಹಲೇ ದಲ್ಲಿರುವ ಜೋರಯ್ಯನ ಮಗ ಶಿದ್ದಯ್ಯ ಈತನ ಮಗ ಬೋಕ್ಕಳು ಧನಾಭಿವೃದ್ಧಿ ಬ್ಯಾಂಕ್ ರಣ ಸಹ.	ಮೈಸೂರು ಬನವನಮಹಲೆ ಯಲ್ಲಿರುವ ರಾಮರಾಯರ ಮ ಪಿಜಂಟ್ ಕೇವಗಿರಾವ್.	22 1 85	26 5 85	ನಾವುಗಳು ಧನಾಭಿವೃದ್ಧಿ ಬ್ಯಾಂಕಿಗೆ ಕೊಡಬೇಕಾದ ಮೊಬಲಗು ಪೈಕಿ ಕೊಟ್ಟಿರುವದು ಜಾತಾ ಮೊಬಲಗು 282–3–3ನ್ನು ಬಂದು ತಿಂಗಳ ವಳಗೆ ಕೊಡುತ್ತೇವೆಂದು ಮತ್ತು ಮೇಲ್ಕಂಡ ಮೊಬಲಗ್ಕೆ ಮಂಡಿ ಮಹಲೆಯಲ್ಲಿರುವ ಮನೆಯನ್ನು ಆಧಾರಮಾಡಿರುವದಾಗಿ.
	ಡಿಟೋ	ಮೈಸೂರು ಲಷ್ಕರ್ ಮಹಲೆಯಲ್ಲಿರುವ ಕಾವೆತಿ ಕಟ್ಟರ ಮಗ ಜರ್ಮಿ ಜೀವನ ಮಾಡುವ ಸುಬ್ಬಾನಾಯಡು.	ಮೈಸೂರು ಲಷ್ಕರ್ ಮಹಲೆಯಲ್ಲಿರುವ ದಾಸಪ್ಪನ ಮಗ ವೆಂಕಟಪ್ಪ.	23 - 4 85	10 10 85	ಮೈಸೂರು ಲಷ್ಕರ್ ಮಹಲೆಯಲ್ಲಿರುವ ಮನೆಯನ್ನು ಆಧಾರ ಮಾಡಿ 60 ರೂಪಾಯಿಗಳು ತೆಗದುಕೊಂಡಿರುವವನ್ನು ಕೇಕಡಾ ಮಾಪ 1ಕ್ಕೆ ಬಂದು ರೂಪಾಯಿ ಮೇರೆ ಅನಲು ಬಡ್ಡಿ ಸಹಯೆರಡು ಖಿಸ್ತಾಗಿ ಪಾವತಿ ಮಾಡುವದಾಗಿ.

ಯಂ. ಅಂನಾಜಿರಾವ್,
ರೆಜಿಸ್ಟ್ರಾರ್.

ತಾರೀಖು 20ನೇ ಸೆಪ್ಟಂಬರ್ 1889.

ಸಕಲನಜಗಳಿಗೂ ಯಿದರಿಂದ ತಿಳಯಪಡಿಸುವದೇನಂದರೆ, ಮೈಸೂರಿನಲ್ಲಿ ಹೊಸದಾಗಿ ತಯಾರಾಗತಕ್ಕ ಶಿಲೇದಾರ್ ಲೈಕ್ ಕಾಮುಗಾರಿ ಕಂಟ್ರಾಕ್ಟಿಗಾಗಿ ಮೊಹರನ್ನಿಟ್ಟು ಬರುವ ದರಖಾಸ್ತುಗಳನ್ನು ಮೈಸೂರು ಡಿವಿಜ್ಞ್ ಯಗ್ಜಿಕ್ಯೂಟಿವ್ ಯಿಂಜನಿಯರವರ ಆಫಿಸಿನಲ್ಲಿ ಬರುವ ಆಕ್ಟೋಬರ್ 9ನೇ ತಾರೀಖು ಪರಿಯಂತರ ಹಿಡಿಯಲ್ಪಡುವದು.

ಸುಮಾರು ಅಂದಾಜಾ ಪರಿಮಾಣವನ್ನು ಈ ಕೆಳಗೆ ವಿವರಿಸಿಯಿದೆ. ಈ ಪರಿಮಾಣವು ಗೊತ್ತಾದ್ದಲ್ಲ ಕಾಮುಗಾರಿಯು 1891ನೇ ಇಸವಿ ಜೂಕ್ ಆಖೈರಿನಲ್ಲಿ ಪೂರೈಸತಕ್ಕದ್ದು.

2. ಪ್ಲಾನ್ ಅಂದಾಜಾ ಯಿತರ ಸಂಗತಿ ಸಹ ದಿವಿ 11 ಘಂಟೆ ಲಾಗಾಯತು ಸಾಯಂಕಾಲ 5 ಘಂಟೆ ವರಿಗೆ ಮೈಸೂರು ಡಿವಿಜ್ಞ್ ಯಗ್ಜಿಕ್ಯೂಟಿವ್ ಇಂಜನಿಯರ್ ಆಫಿಸಿನಲ್ಲಿ ನೋಡಬಹುದು.

3. ದರಖಾಸ್ತುಗಳು ಅಚ್ಚಿನ ನಮೂನೆಯಲ್ಲಿ ಯಿರಬೇಕು. ಈ ನಮೂನೆಯನ್ನು ಯಗ್ಜಿಕ್ಯೂಟಿವ್ ಇಂಜನಿಯರ್ ಆಫಿಸಿನಲ್ಲಿ ಪಡಿಯ ಬಹುದು. ತರಹೇವಾರಿಕೆಲಸವನ್ನು ಯಾವ ಯಾವ ದರದಲ್ಲಿ ನಡಿಸಲ್ಪಡಬಹುದೋ ಅದನ್ನು ತೋರಿಸುವ ಕೆಳಗೆ ಕೊಟ್ಟುಯಿರುವ ಫಾರಂನಂತೆ ಬಂದು ಪಟ್ಟಿ ತಯಾರಿಯಿಂದ ದರಖಾಸ್ತನೊವನೆ ಕಳುಹಿಸಿಕೊಡಬೇಕು.

4. ಪ್ರತಿ ದರಖಾಸ್ತುಗಳೂ ಗವರ್ಮೆಂಟ್ ಪ್ರೋನೋಟ್ ಮೂಲಕವಾಗಲಿ ನಗದಾಗಲಿ 50 ರೂಪಾಯಿ ಡಿಪಾಜಿಟ್ಟನ್ನೊಡ್ಡಗೂಡಿ ಯಿರಬೇಕು ಮತ್ತು ವೈಸೂರಿನಲ್ಲಿ ಕಟ್ಟಲ್ಪಡುವ ಶಿಲೇದಾರ್ ಲೈಕ್ ಕಾಂಗಾರಿ ಕಂಟ್ರಾಕ್ಟ್ ದರಖಾಸ್ತು ಯಂತ ಲಿಫಾಫೆ ಮೇಲೆ ಬರದು ಯಿರಬೇಕು ಹೀಗೆ ಯಿರದೆ ಬರುವ ದರಖಾಸ್ತುಗಳನ್ನ ತಿರಸ್ಕರಿಸಲ್ಪಡುವದು.

5. ದರಖಾಸ್ತುಗಳನ್ನು ಅಂಗೀಕರಿಸತಕ್ಕದ್ದು ಚೀಫ್ ಯಿಂಜನಿಯರವರದಾಗಿ ಯಿಧೆ ಅವರು ಕಂಟ್ರಾಕ್ಟರ ವ ಇತರ ದರಖಾಸ್ತನ್ನು ಮಂಜೂರ್ಮಾಡುವದಕ್ಕೂ ಅಥವಾ ದರಖಾಸ್ತನ್ನು ತಿರಸ್ಕರಿಸಿದ್ದಕ್ಕೆ ಕಾರಣವನ್ನು ಹೇಳುವದಕ್ಕೂ ಬದ್ಧರಾಗಿಯಿವರಿಲ್ಲವು.

6. ಯಾವ ದರಖಾಸ್ತು ಮಂಜೂರು ಮಾಡಲ್ಪಡುವದೋ ಆಂಥಾ ದರಖಾಸ್ತುದಾರನ ಹೆಸರನ್ನು ಯಗ್ಜಿಕ್ಯೂಟಿವ್ ಯಿಂಜನಿಯರ್ ಆಫಿಸ್ ನೋಟಿಸ್ ಬೋರ್ಡಿನಲ್ಲಿ ಕ್ರಮೇಣ ಚಿಕಟಾಯಿಸಲ್ಪಡುವದು. ದರಖಾಸ್ತು ಮಂಜೂರಾಯಿತೇ ಅಥವಾ ಅನಂಗೀಕಾರವಾಯಿತೇ ಯಂಬು ಬರುವ ಪ್ರಶ್ನೆಗಳಿಗೆ ಜವಾಬು ದೊರಿಯಲಾರದು.

7. ದರಖಾಸ್ತು ಮಂಜೂರು ಮಾಡಿದ 8 ರೋಜುಗಳವಳಗಾಗಿ ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ಹಾಜರಾಗಿ ಕಂಟ್ರಾಕ್ಟ್ ಬಾಂಡನ್ನು ಬರದು ಕೊಡತಕ್ಕದ್ದು. ಹೀಗೆ ಮಾಡದಿರುವ ಸಂದರ್ಭದಲ್ಲಿ ದರಖಾಸ್ತು ರದ್ದಾದ ಹಾಗೆ ಭಾವಿಸಲ್ಪಡುವದಲ್ಲದೆ ದರಖಾಸ್ತುದಾರನು ತನ್ನ ಡಿಪಾಜಿಟ್ ಮೊಬಲಗನ್ನು ಹೋಗಲಾಡಿಕೊಳ್ಳುವನು.

8. ದರಖಾಸ್ತುಗಳ ಪೈಕಿ ಬಂದು ದರಖಾಸ್ತು ಅಂಗೀಕಾರವಾದ ಕೂಡ್ಲೆ ಅನಂಗೀಕಾರವಾದ ದರಖಾಸ್ತುಗಳ ಡಿಪಾಜಿಟ್ ಹಣವು ವಾಪಸ್ ಮಾಡಲ್ಪಡುವದು.

ವಿವರ.	ಗೆ.	ದರ.	ಮೊತ್ತಾವ ಪರಿಮಾಣ.
ಮಟ್ಟೀಕೋದಿ	ಸಲೆಗಜ		635
ಕಾಡುಕಲ್ಲು ಮಂಣಿನಿಂದ ಪಾಯಾಭರ್ತಿ	ಡಿಟೋ		635
ಸುಟ್ಟಯಿಟ್ಟಿಗೆ ಮಂಣು	ಸಲೆಅಡಿ		33393
ಸುಟ್ಟಯಿಟ್ಟಿಗೆ ಸುಂಣ	ಡಿಟೋ		2497
ಕಲ್ಲುಜಪ್ಪಡಿ	ಚದರ ಅಡಿ		4001
ಕದಗಳು ಮತ್ತು ಕಿಟಕಿಗಳು	ಡಿಟೋ		1340
ಯಿಟ್ಟಿಗೆ ಗಾರೆ ಪಡಿಚಟ್ಟು	ಲಾಂಬಿ ಅಡಿ		1573
ಸುಂಣದ ಸಂದುಗಾರೆ	ಚದರ		6·40
ಟೂರುಹಾಕುವದು	ಡಿಟೋ		29·95
ಹೊನ್ನೇ ಮರದಕೆಲಸ	ಸಲೆಅಡಿ		456
ಹೊನ್ನೇ ಮರದ ರೀಪೀಸ್‌ಪಟ್ಟಿ, ಮಂಗಳೂರು ಅವ್ವಲ್ ಕ್ವಾಲಿನ ಹೆಂಚು, ಮಳೆ ಬಗೈರೇ ಕಂಪ್ಲೀಟಿನಿಂದ ಮೇಲ್ ಛಾವಣಿ	ಚದರ		114·46
ಸೂರ್‌ಪಟ್ಟಿ	ಲಾಂಬಿಅಡಿ		79
ಫಿನಿಯಲ್ ಯಾನೆ ಸೂರಪಟ್ಟಿ ಮಧ್ಯದ ಗಾಳಿ ಕಂಬಿ ..	ಅವದು		2
ಪೆಳ್ಳಕು ಹೆಂಜು	ಡಿಟೋ		80
ಸುಂಣದ ವರಟು ಗಿಲಾವು	ಚದರ		215·81
ಮಂಣಿನಗಿಲಾವು	ಡಿಟೋ		334·80
ಗ್ರಾವಲ್‌ನಿಂದ ನೆಲಘಟ್ಟನೆ	ಸಲೆಗಜ		119
ಸುಂಣ ತೊಡೆಯುವದು	ಚದರ		334·80
ಬಂಣ ಹಾಕುವದು	ಡಿಟೋ		215·81
ನೆಲಸರಿಮಾಡಿ ಗ್ರಾವಲ್‌ಹಾಕಿ ರೋಡ್ ತಯಾರ್ಮಾಡುವದಕ್ಕೆ ಪೊತ್ತ ರೂಪಾಯಿಗಳು	.. ..		..

ವಿ. ಪೋಟ್, ಕರ್ಯ,
ಯಗ್ಜಿಕ್ಯೂಟಿವ್ ಯಿಂಜನಿಯರ್,
ಮೈಸೂರು ಡಿವಿಜ್ಞಿ.

ತಾರೀಖು 15ನೇ ಆಗಸ್ಟ್ 1889.

ವಜ್ರದ ಹತ್ತ ಕಡೆಕು ಪಲಕೆಲಾಂಬಿ ಆರ್ಧ ಅಂಗುಲ ರುಂದಿ ಸುಮಾರು ಹಾಗೂ ಬ್ಯಾಳಿ ಅಂಗುಲ, ಸುಮಾರು ಬಾದಾಮಿ ಮಾಟ, ಚಿನ್ನದಲ್ಲಿ ಕಟ್ಟಿದೆ, ಚಿನ್ನದ ತಿರುಪು ಸಹವುಳ್ಳ ಸದರೀ ಹತ್ತ ಕಡಕು ಸ್ಯ 1889ನೇ ಇಸವಿ ಆಗಸ್ಟು 11ನೇ ಹಗಲು ಸುಮಾರು 1 ಘಂಟೇ ಹೊತ್ತಿನಲ್ಲಿ ನಂಜಿನಗೂಡು ವೂರಿಗೆ ಪೂತ್ತರ ದಿಕ್ಕಿನಲ್ಲಿರುವ ಸ್ನಾನಘಟ್ಟದ ಬಳಿ ಬಿದ್ದು ಹೋಯಿತು ಈ ಮೂಲ ಯತಾರಿಗಾದರೂ ಸಿಕ್ಕಿ ಇದರ ಅಡಿ ರುಜು ಮಾಡಿರುವ ದ್ವಿತೀಯ ಅಸಿಸ್ಟೆಂಟ್ ಕಮ್ಮಿಷನರ್ ಶ್ರೀನಿವಾಸಯ್ಯಂಗಾರ್ಯರಿಗಾಗಲಿ ಸರಕಾರಕ್ಕಾಗಲಿ ತಂದುಕೊಟ್ಟಲ್ಲಿ 50 ರೂಪಾಯಿ ಇನಾಮು ಕೊಡಲ್ಪಡುತ್ತದೆ. ಹತ್ತ ಕಡಕಿನ ಬೆಲೆ ಸುಮಾರ್ 200 ರೂಪಾಯಿ.

ಎ. ಶ್ರೀನಿವಾಸಯ್ಯಂಗಾರ್,
ದ್ವಿತೀಯ ಅಸಿಸ್ಟೆಂಟ್ ಕಮ್ಮಿಷನರ್.

ನೋಟಿಫಿಕೇಷನ್.

ತಾರೀಖು 27ನೇ ಸೆಪ್ಟಂಬರ್ 1889.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ, ಅನುಪಯೋಗಕರವಾದ್ದೆಂದು ನಿಶ್ಚಯಿಸಲ್ಪಟ್ಟಿರುವ ಒಂದು ಕಂಭವುಳ್ಳ ಡೇರಾ ಬಂದು ಮತ್ತು ರೌಟೀಯೂ ಸಹ ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಅಸಿಸ್ಟೆಂಟ್ ಕ್ಯೂರೇಟರ್ ಸಾಹೆಬರವರ ಆಫಿಸ್ ಬಳಿ. ಸ್ಯ 1889ನೇ ಇಸವಿ ನವಂಬರ್ 1ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವದು.

ಸಿ. ನಾರಾಯಣರಾವ್,
ಅಸಿಸ್ಟೆಂಟ್ ಕ್ಯೂರೇಟರ್ ಆಫ್ ಫಾರೆಸ್ಟ್ಸ್.

ಶಿವಮೊಗ್ಗಾ ಡಿಸ್ಟ್ರಿಕ್ಟ್.

ಫಾರೆಸ್ಟ್ ಇಲಾಖಾ.

ತಾರೀಖು 16ನೇ ಸೆಪ್ಟಂಬರ್ 1889.

1. ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಈ ಕೆಳಗೆ ಕಾಣಿಸಿರುವ ಡಿಪೋಗಳಿಗೆ ಕಂಟ್ರಾಕ್ಟು ಮೂಲಕ ನಾಟಾ ವಗೈರೆ ಸಾಮ್ರ ಜಮಾಯಿಸುವದಕ್ಕೆ ಈ ತಾರೀಖು ಲಾಗಾಯತು ಆಕ್ಟೋಬರ್ ತಾರೀಖು 1ರ ವರಿಗೆ ಟೆಂಡರ್‌ಗಳು ಅಂಗೀಕರಿಸಲ್ಪಡುತ್ತದೆ.